ಪ್ರಬಂಧ



**ಬಿ.ಎಂ. ಭಾರತಿ ಹಾದಿಗೆ**

ಕಲೆ: ಗುಜ್ಜಾರ್



# ಅಮ್ಮನ ಜೊತೆಯಲ್ಲಿ ಸುಮ್ಮನ ನೆನೆಯುವೆ

ಮಲೆನಾಡಿನಲ್ಲಿ ಮಳೆಗಾಲದಲ್ಲಿ ಅದರಲ್ಲೂ ನಮ್ಮ ಮರಗೊಟರಿನಲ್ಲಿ ಬೆಳಗು-ಬೈಗುಗಳಿಗೆ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಆಕಾಶದ ಮೇಲೆ ನಿಂತುಕೊಂಡು ಯಾರೋ ನೀರನ್ನು ಚೆಲ್ಲಿದಂತೆ ಒಂದೇ ಸಮನೆ ಬಿಡುವಿಲ್ಲದೆ ಮಳೆ ಸುರಿಯುತ್ತಿತ್ತು. ಆಲಿಕಲ್ಲುಗಳು ಬಿದ್ದು ಮನೆಯ ಹೆಂಚನ್ನು ಒಡೆದು ಹಾಕುತ್ತಿದ್ದವು. ನಮ್ಮಮ್ಮ ಬಿಳಿಯ ಪೆಪ್ಪರ್‌ಮೆಂಟಿನಂತಿರುತ್ತಿದ್ದ ಆಲಿಕಲ್ಲುಗಳನ್ನು ಹೆರಿಕಿ ನಮಗೆ ಕೊಡುತ್ತಾ, 'ಹೊಟ್ಟೆನೋವು ಬರಕ್ಲ, ತಿನ್ನಿ ಆರೋಗ್ಯಕ್ಕೆ ಒಳ್ಳೇದು' ಎನ್ನುತ್ತಿದ್ದರು. ಅಗ ನಮಗಾಗುತ್ತಿದ್ದ ಸಂತೋಷ ಹೇಳತೀರದು. ಲಬಕ್ಕನೆ ಬಾಯಿಗೆ ಹಾಕಿಕೊಳ್ಳುತ್ತಿದ್ದೆವು. ಮಳೆ ಬಂದಾಗ ಆಲಿಕಲ್ಲು ಬೀಳದಿದ್ದರೆ ನಮಗೆಲ್ಲಾ ಬೇಸರವಾಗುತ್ತಿತ್ತು.

ಅನಂತವಾದ ಆಕಾಶದಲ್ಲಿ ನೋಡು ನೋಡುತ್ತಿದ್ದಂತೆ ಮೋಡಗಳ ಸೃಷ್ಟಿಯಾಗಿ ಭೂಮಿಗೆ ಮಳೆ ಬೀಳುವ ದೃಶ್ಯ ನಮಗೆ ಅವತ್ತು ವಿಸ್ಮಯವಾಗಿ ಕಾಣಲಿಲ್ಲ. 'ಅಂದು ಮಲೆನಾಡಿನಲ್ಲಿ ತಿಂಗಳುಗಟ್ಟಲೆ ಗದ್ದೆ ನಾಟಿ ಮಾಡುತ್ತಿದ್ದರಿಂದ ಅದಕ್ಕೆ ನೀರಿನ ಅಗತ್ಯವಿರುವುದರಿಂದ ಮಳೆ ಬರುತ್ತದೆ. ನಾಟಿಯಾದ ಮೇಲೆ ಮಳೆ ನಿಲ್ಲುತ್ತದೆ' ಎಂಬ ಭಾವನೆ ನಮ್ಮದು. ಆದರೂ ಮಳೆ ಬರೀ ಉಪಕಾರವನ್ನು ಮಾತ್ರ ಮಾಡುತ್ತಿರಲಿಲ್ಲ. ಪಾಪದವರ ಪ್ರಾಣಿಪಕ್ಷಿಗಳ ಜೀವ ಹಿಂಡುತ್ತಿತ್ತು. ತಿಂಗಳುಗಟ್ಟಲೆ ಸೂರ್ಯನ ಕಿರಣಗಳು ಮಾಯ. ಕಾಗೆ, ಗಿಣಿ, ಕಾಜಾಣ, ಗುಬ್ಬಿಗಳು, ಕಾಡುಕೋಳಿ, ಸುಡುಗಾಡು ಕೋಳಿಗಳು ಹುಡುಕಿದರೂ ಸಿಗುತ್ತಿರಲಿಲ್ಲ. ಹಸು, ಎಮ್ಮೆಗಳಿಗೆ ಕಾಲುಬಾಯಿ ರೋಗ ಬಂದು ಅವು ಕೊಟ್ಟಿಗೆಯಲ್ಲಿ ಅಸುನೀಗುತ್ತಿದ್ದವು. ರೊಯ್ಯನೆ ಬೀಸುವ ಬಿರುಗಾಳಿಗೆ ಮರಗಳು ಲೈಟುಕಂಬಗಳು ಉದ್ದುದ್ದ, ಅಡ್ಡಡ್ಡ ಬೀಳುತ್ತಿದ್ದವು. ಸಾಕಪ್ಪಾಸಾಕು ಈ ಮಳೆಗಾಲ, ಬಿಸಿಲು ಬಂದರೆ ಸಾಕು ದೇವರೇ ಎಂದು ಮನೆಮಂದಿಯೆಲ್ಲಾ ಕಣ್ಣುಕಣ್ಣು ಬಿಡುತ್ತಿದ್ದರೆ, ಇದಾವುದರ ಪರಿವೆಯೇ ಇಲ್ಲದೆ ಗುಮ್ಮವೊಂದು ಕಣ್ಣು ಮುಚ್ಚಿಕೊಂಡು ದಿನವೆಲ್ಲಾ ಕೂಗುತ್ತಲೇ ಇರುತ್ತಿತ್ತು.

ಈ ಗುಮ್ಮ ಏಲಕ್ಕಿ ತೋಟದ ಹನಾಲಿನಲ್ಲಿದ್ದ ಕೂಗಿನ ಮಣಿಕೆಯ ಪಕ್ಕದ ಬಕ್ಕೆ ಹಲಸಿನ ಮರದ